ಕೆಂಪಮ್ಮನಿಗೆ ಎಂಬತ್ತೈದು ವರ್ಷ. ಮಕ್ಕಳು ಮೊಮ್ಮಕ್ಕಳನ್ನ ಕಂಡಿದ್ದಾಳೆ. ಕಾಲ ನಿಲ್ಲೋ ಜಾಯಮಾನದ್ದಲ್ಲ. ಬಟ್ಟೆ ತೊಳೆಯಲು ಸೋಪು ಬಂತು, ಬಣ್ಣ ಬಿಳಿಯಾಗಿಸೊ ಪೌಡರು ಬಂತು, ಪ್ಲಾಸ್ಟಿಕ್ಕು ತರಾ ಕಾಣೋ ಟರ್ಲಿನ್ನು ಅಂಗಿ. ಮನೇಲಿ ಐದು ನಿಮಿಷಕ್ಕೆ ತೊಳೆದು ಗಾಳೀಲಿ ಹತ್ತು ನಿಮಿಷ ಹಾಗೆ ಹೀಗೆ ಆಡಿಸಿದ್ರೆ ಒಣಗತದೆ ಅಂತ ಪ್ರದರ್ಶನ ಮಾಡತಿದ್ರು ಆಚೀಚೇ ಮನೆಯವರು. ವಾಯಿಲ್ಲು, ಟೆರಿಕಾಟು ಏನೇನೋ ಬಂತಪ್ಪ. ಕೆರೆಯಲ್ಲಿ ನೀರು ಕಮ್ಮಿಯಾಗುತ್ತಿತ್ತು. ಜನ ಒತ್ತುವರಿ ಮಾಡಿ ಬೆಳೆ ತೆಗೆಯಲು ಸುರು ಮಾಡಿದ್ದರು. ಸುಬ್ಬಿ ಹುಟ್ಟುವಾಗ ಎರಡೇ ಕತ್ತೆಗಳುಳಿದುವು. ಚಂದ್ರಯ್ಯ ಬುದ್ಧಿವಂತನಾಗಿದ್ದಕ್ಕೆ ಬದಲಾವಣೆಗೆ ತಕ್ಕದ್ದನ್ನು ಮಾಡಿದ. ಮನೆಯೆದುರು ಬೋರ್ಡುಹಾಕಿ ಬಟ್ಟೆಗಳನ್ನ ಅಲ್ಲೇ ತೆಗೆದುಕೊಂಡು ತೊಳೆಸಿ ಇಸ್ತ್ರಿಮಾಡಿಟ್ಟು ಗಿರಾಕಿಗಳಿಗೆ ಅಲ್ಲೆ ಕೊಡತೊಡಗಿದ. ಗಂಡುಮಕ್ಕಳು ಸಹಾಯಕ್ಕೆ ಬರುವ ಕಾಲಕ್ಕೆ ಗಾಜಿನ ಬಾಗಿಲಿರೋ ಕಪಾಟು, ಇಸ್ತ್ರಿ ಮಾಡೋ ಮೇಜು ಎಲ್ಲ ಇಡಿಸಿ ಲಕಲಕ ಮಾಡಿದ. 'ಮಾಡ್ರನ್ ಲಾಂಡ್ರಿ' ಅಂತ ಬೋರ್ಡು, ಇಲ್ಲಿ ರೇಷ್ಮೆಯಿಂದ ಹಿಡಿದು ಎಲ್ಲಾ ತರದ ಬಟ್ಟೆಗಳನ್ನ ವಗೆಯಲಾಗುತ್ತದೆ ಅಂತ ವಕ್ಕಣೆ ಅಕ್ಕಪಕ್ಕ. ವ್ಯಾಪಾರ ಬೆಳೀತು. ಕತ್ತೆಗಳ್ನ ಮಾರಲಿಲ್ಲ; ಮನೆಯಲ್ಲೇ ವಯಸ್ಸಾಗಿ ಸತ್ತು ಹತ್ತುಹನ್ನೊಂದು ವರ್ಷವಾಯಿತೇನೋ. ಎಸ್ಸೆಸ್ಸೆಲ್ಸಿ ಮುಗಿಸಿದ ರಮೇಶ ಲಾಂಡ್ರೀಲಿ ಕೈಜೋಡಿಸಿದ. ಬಿ.ಎ ಮಾಡಿದ ಚಿದಾನಂದ ಒಳ್ಳೆ ಕೆಲಸ ಸಿಕ್ಕಿದರೆ ಸೇರೋದು ಇಲ್ಲವಾದರೆ ಲಾಂಡ್ರೀಲಿ ಇರೋದು ಅಂತ ಇದ್ದ. ಸುಬ್ಬಿ ಕಿರಿಯವಳು. ಎಸ್ಸೆಸ್ಸೆಲ್ಸಿಯಲ್ಲಿ ಫಸ್ಟ್‌ಕ್ಲಾಸು ಪಡೆದು ಪಾಸಾದವಳು ಪಿಯುಸಿ ಸೇರಿದಳು. ಆದರೆ ಅದೇನಾಯ್ತೋ ಹುಡುಗಿ ಎರಡು ಸಾರಿ ಫೇಲಾದಳು. ಸಿನಿಮಾ, ಟೀವಿ ಸೀರಿಯಲ್ಲು ನೋಡುತ್ತಾ ಕಾಲಕಳೀತಿದ್ದರೆ ಅದರಲ್ಲೇನಾಶ್ಚರ್ಯ? ಕೆಂಪಮ್ಮನಿಗೆ ನಿದ್ದೆಯಾವರಿಸಿತು.

ಎರಡೇ ದಿನದಲ್ಲಿ ಸುಬ್ಬಿಯ ಭಯ ನಿಜವಾಗಿತ್ತು. ಮನೆಯಲ್ಲಿ ಮದುವೆ ಎಂಬ ಶಬ್ದ ಮೊದಲ ಬಾರಿ ಪ್ರಸ್ತಾಪವಾಗಿತ್ತು. ಅವಳಿಗೆ ಏನಾದರು ಸಾಧಿಸಬೇಕೆಂಬ ಅದಮ್ಯ ಹಂಬಲವಿತ್ತು. ಹೈಸ್ಕೂಲಿಗೆ ಬರುತ್ತಿದ್ದಂತೆ ತನ್ನ ಸೌಂದರ್ಯ ಎಲ್ಲರನ್ನು ಆಕರ್ಷಿಸುತ್ತಿದೆ ಎಂಬರಿವು ಮೂಡುತ್ತ ಒಂದು ಮೇಲರಿಮೆ ಮನಸ್ಸಿನಲ್ಲಿ ಗೂಡುಕಟ್ಟಿತು. ರ‍್ಯಾಂಕು ಬಂದು ಬಹಳ ಓದಿ ದೊಡ್ಡ ಹುದ್ದೆ ನಿರ್ವಹಿಸಬೇಕು ಎಂಬ ಆಸೆಗೆ ಎಸ್ಸೆಸ್ಸೆಲ್ಸಿಯ ಅಂಕಗಳು ಪ್ರೋತ್ಸಾಹಿಸಲಿಲ್ಲ. ನಿತ್ಯ ನೋಡುತ್ತಿದ್ದ ಸೀರಿಯಲ್ಲು ಸಿನಿಮಾಗಳ ನಾಯಕಿಯರಲ್ಲಿ ತನ್ನನ್ನ ಕಲ್ಪಿಸಿಕೊಳ್ಳತೊಡಗಿ ಅವರಲ್ಲಿ ಯಾರೂ ತನ್ನಷ್ಟು ಚೆನ್ನಾಗಿಲ್ಲ ಎಂಬಂಶ ಏನೋ ಆಕಾಂಕ್ಷೆ ಹುಟ್ಟಿಸುತ್ತಿತ್ತು. ಪತ್ರಿಕೆಗಳಲ್ಲಿ ಪ್ರಚಾರ, ಹೋದಲ್ಲಿ ಕಾಣುವ ಜನಪ್ರಿಯತೆ ಮೇಲಿಂದ ಆ ಪ್ರಮಾಣದ ಸಂಭಾವನೆ. ಒಂದು ಸಿನಿಮಾಕ್ಕೆ ಐವತ್ತು ಲಕ್ಷ, ಕೋಟಿ, ಮೂರು ಕೋಟಿ! ಓದಿ ತಲೆ ಚಚ್ಚಿಕೊಳ್ಳುವ ಕೆಲಸವಿಲ್ಲ. ಹೇಳಿದಷ್ಟು ಅಭಿನಯ ಮಾಡಿದರಾಯ್ತು ಎನ್ನುವ ಯೋಚನೆ, ಅದಕ್ಕೆ ತಕ್ಕಂತೆ ಗೆಳತಿಯರು 'ನಿಂಗೇನಮ್ಮ... ಒಳ್ಳೇ ಸಿನಿಮಾ ಸ್ಟಾರ್ ಹಾಗಿದ್ದೀಯ' ಅಂತ ಹೊಗಳುವುದು ಪುಳಕಕ್ಕೆ ಕಾರಣವಾಗುತ್ತಿತ್ತು. ಫೇಸ್‌ವಾಷ್, ಐ ಲೈನರ್, ಲಿಪ್‌ಸ್ಟಿಕ್, ಪೌಡರ್, ಶೇಡಿಂಗ್ಕಲರ್ಸ್, ಬ್ರಶ್, ಟ್ರಿಮರ್ ಅಂತೆಲ್ಲ ಖರೀದಿಸಿ ಗುಟ್ಟಾಗಿ ವ್ಯಾನಿಟಿ ಬ್ಯಾಗಿನಲ್ಲಿ ತಂದು ಕೋಣೆ ಬಾಗಿಲು ಹಾಕಿಕೊಂಡು ಅಲಂಕಾರ ಮಾಡಿಕೊಂಡು ನೋಡುತ್ತಿದ್ದಳು. ಕೂದಲನ್ನು ಸೆರಗನ್ನು ಬೇರೆಬೇರೆ ವಿನ್ಯಾಸದಲ್ಲಿಟ್ಟು, ವಿವಿಧ ಕೋನಗಳಲ್ಲಿ ನಿಂತು ಪರಾಂಬರಿಸಿ ತೃಪ್ತಿಪಡುತ್ತಿದ್ದಳು. ತಾನು ಬೆಂಗಳೂರಲ್ಲೊ ಮುಂಬಯಿಯಲ್ಲೊ ಆಧುನಿಕ ಶ್ರೀಮಂತರ ಮನೆಯಲ್ಲಿ ಹುಟ್ಟಿದ್ದರೇನಾಗುತ್ತಿತ್ತು ಅಂತ ಸ್ವಾನುಕಂಪಕ್ಕೊಳಗಾಗುತ್ತಿದ್ದಳು. ಅಸ್ಪಷ್ಟ ನಿರ್ಧಾರದ ರೂಪುರೇಷೆಯೊಂದು ಮಿಂಚಿ ಮಾಯವಾಗುತ್ತಿತ್ತು. ಆಮೇಲೆ ಅಲಂಕಾರವನ್ನು